**<u>ದಿನಾಂಕ:20-06-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>**

<u>ಪಾಟೀ ಸವಾಲು: **3** ನೇ ಎದುರುದಾರರ ಪರ ಶ್ರೀ ಎನ್ ಡಿ ಕೆ ವಕೀಲರು ಪಾಟೀ ಸವಾಲನ್ನು ವಾಟ್ಸ್ ಆಪ್ ವೀಡಿಯೋ ಕಾಲ್ ಮುಖಾಂತರ ಮಾಡಿರುತ್ತಾರೆ.</u>

ನಾನು 6 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಅಪಘಾತ ಆದ ದಿವಸ ನನ್ನ ತಮ್ಮನಾದ ಆಕಾಶ್ ಇವರ ಜೊತೆ ಕಟ್ಟೆಮನೆಯಿಂದ ಜಯಪುರಕ್ಕೆ ಹೋಗುತ್ತಿದ್ದೆನು. ನನ್ನ ತಮ್ಮ ಚಲಾಯಿಸುತ್ತಿದ್ದ ಬೈಕು ಆತನ ಮಾಲಿಕತ್ವಕ್ಕೆ ಸಂಬಂಧಿಸಿರುತ್ತದೆ. ಅಪಘಾತ ಆಗುವ ಕಾಲಕ್ಕೆ ನನ್ನ ತಮ್ಮನಿಗೆ ಚಾಲನಾ ಪರವಾನಿಗೆ ಪತ್ರ ಮತ್ತು ಸದರಿ ಬೈಕಿಗೆ ವಿಮೆ ಇರಲಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳನ್ನು ನಾನೆ ನನ್ನ ವಕೀಲರಿಗೆ ತಂದು ಕೊಟ್ಟಿರುತ್ತೇನೆ. ಆಕಾಶ್ ಈತನಿಗೆ ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಎಂಬ ವಿಚಾರವನ್ನು ನಮ್ಮ ವಕೀಲರು ನನಗೆ ಹೇಳಿರುವುದಿಲ್ಲ. ನನ್ನ ತಮ್ಮ ಹಾಗೂ ಬೈಕಿನ ಮಾಲೀಕನನ್ನು ಪಕ್ಷಗಾರರನ್ನಾಗಿ ಮಾಡಲು ನನಗೆ ತೊಂದರೆ ಇರುವುದಿಲ್ಲ. ಆಕಾಶ್ ಈತನನಿಗೆ ಚಾಲನಾ ಪರವಾನಿಗೆ ಪತ್ರ ಇಲ್ಲದೇ ಇದ್ದ ಕಾರಣ ಆತ ಬೈಕನ್ನು ಸರಿಯಾಗಿ ಚಲಾಯಿಸುತ್ತಿರಲಿಲ್ಲ ಎಂದರೆ ಸರಿಯಲ್ಲ.

2. ನಾನು ಅಪಘಾತ ಆಗುವ ಕಾಲಕ್ಕೆ ಗಾರೆ ಕೆಲಸಕ್ಕೆ ಹೋಗುತ್ತಿದ್ದು ಈಗ ಹೋಗುತ್ತಿಲ್ಲ. ನಮ್ಮ ಕುಟುಂಬಕ್ಕೆ ಬಿ.ಪಿ.ಎಲ್ ಕಾರ್ಡ್ ಇರುತ್ತದೆ. ಅದನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನಮಗೆ ಆದಾಯ ಕಡಿಮೆ ಇದೆ ಎಂದು ಬಿ.ಪಿ.ಎಲ್ ಕಾರ್ಡ್ ನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿ. ನನಗೆ ಮದುವೆಯಾಗಿ 25 ವರ್ಷ ಆಗಿರುತ್ತದೆ. ನನ್ನ ಮಗಳಿಗೆ 19 ವರ್ಷ ಹಾಗೂ ಮಗನಿಗೆ 17 ವರ್ಷ ಇರುತ್ತದೆ. ನಾನು ಈಗಲೂ ಗಾರೆ ಕೆಲಸ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ಈ ದಿನ ನ್ಯಾಯಾಲಯಕ್ಕೆ ಒಬ್ಬನೆ ಬಂದಿರುತ್ತೇನೆ.

3. ಅಪಘಾತ ಆದ ನಂತರ ನನ್ನನ್ನು ಜಯಪುರದ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ನಂತರ ಅಲ್ಲಿಂದ ಕೊಪ್ಪ ಸರ್ಕಾರಿ ಆಸ್ಪತ್ರೆಗೆ ನನ್ನನ್ನು ಕರೆದುಕೊಂಡು ಹೋಗಿದ್ದು ನಂತರ ಎನ್ ಆರ್ ಪುರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ನಂತರ ಅಲ್ಲಿಂದ ಮಣಿಪಾಲ ಆಸ್ಪತ್ರೆಗೆ ಕೆರೆದುಕೊಂಡು ಹೋಗಿವಂತೆ ಹೇಳಿದ್ದು ನನ್ನನ್ನು ಮಂಗಳೂರಿನ ಕ್ರಿಶ್ಚಿಯನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅಲ್ಲಿ ನಾನು ಒಂದುವರೆ ತಿಂಗಳುಗಳ ಕಾಲ ಆಸ್ಪತ್ರೆಯಲ್ಲಿ ಇರುತ್ತೇನೆ. ಅಪಘಾತ ಆದ ದಿವಸ ನನ್ನ ತಮ್ಮ ಅಜಿತ್ ಎನ್ನುವವರು ದೂರನ್ನು ಕೊಟ್ಟಿರುತ್ತಾರೆ. ದೂರು ಕೊಟ್ಟಿರುವ ವಿಚಾರ ನನಗೆ 3 ತಿಂಗಳ ನಂತರ ಗೊತ್ತಾಗಿರುತ್ತದೆ.

ಸಾಕ್ಷಿ ಮುಂದುವರೆದು ನನಗೆ ಆವಾಗ ಜ್ಞಾಪಕ ಶಕ್ತಿ ಇರಲಿಲ್ಲ ಎಂದು ಉತ್ತರಿಸುತ್ತಾರೆ. ನಾನು ತಿಂಗಳಲ್ಲಿ 15 ದಿವಸ ಕೆಲಸಕ್ಕೆ ಹೋಗುತ್ತಿದ್ದೆ. ನನಗೆ ದಿನಕ್ಕೆ ರೂ.380/- ಕೂಲಿ ಕೊಡುತ್ತಿದ್ದರು. ನನ್ನ ಹೆಂಡತಿ ಕೆಲಸಕ್ಕೆ ಹೋಗುತ್ತಾರೆ ಎಂದರೆ ಸರಿಯಲ್ಲ. ಈಗ ನನ್ನ ಹೆಂಡತಿ ಮತ್ತು ನನ್ನ ತಾಯಿ ಕೆಲಸಕ್ಕೆ ಹೋಗುತ್ತಾರೆ.

4. ಅಪಘಾತವು ನನ್ನ ತಮ್ಮ ಆಕಾಶ್ ಮೋಟಾರು ಸೈಕಲ್ ಅನ್ನು ಅತೀ ವೇಗ ಮತ್ತು ಅಜಾಗರುಕತೆಯಿಂದ ಚಾಲನೆ ಮಾಡಿಕೊಂಡು ಬಂದು ಅಪಘಾತ ಪಡಿಸಿರುತ್ತಾನೆ ಎಂದರೆ ಸರಿಯಲ್ಲ. ನನ್ನ ತಮ್ಮನಿಗೆ ಚಾಲನಾ ಪರವಾನಿಗೆ ಪತ್ರ ಇಲ್ಲದಿರುವ ಕಾರಣ ಆತನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ಅರ್ಜಿಯಲ್ಲಿ ಹೇಳಿದಂತೆ ಸಾಕಷ್ಟು ಆದಾಯ ಇರಲಿಲ್ಲ ಎಂದರೆ ಸರಿ. ನನ್ನ ಆಸ್ಪತ್ರೆಯ ಸುಮಾರು 2 ಲಕ್ಷ ರೂ ಹಣ ಖರ್ಚು ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ನಂತರ ನಾಲ್ಕು ಬಾರಿ ಆಸ್ಪತ್ರೆಗೆ ಹೋಗಿ ಬಂದಿರುತ್ತೇನೆ. ಆ ಸಂಬಂಧ ದಾಖಲೆ ಇರುತ್ತದೆ. ನಾನು ಈ ಅರ್ಜಿಯನ್ನು ನಿಗಧಿತ ಅವಧಿಯಲ್ಲಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮನ ತಪ್ಪಿನಿಂದ ಅಪಘಾತ ಆದ ಕಾರಣ 3 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ತರು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹರ ಪಡೆಯುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೊದಲಿನಂತೆ ಈಗಲೂ ಸಹ ಕೆಲಸ ಮಾಡುತ್ತಿದ್ದರೂ ಸಹ ಯಾವುದೇ ಕೆಲಸ ಮಾಡುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
**ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,**
**ಸಂಚಾರಿ ನ್ಯಾಯಾಲಯ, ಕೊಪ್ಪ.**

ಸಾಕ್ಷಿದಾರರ ಸಹಿಃ